ಓ ಎಸ್ **799/2014**

ಡಿ ಡಬ್ಲ್ಯೂ **-3**

**ದಿಃ 13.02.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಸಿ ಎನ್ ವಕೀಲರಿಂದ ಃ**

ದಾವಾ ಆಸ್ತಿ ಮೂಲತಃ ರಾಮಕ್ಕ ನವರ ಸ್ವತ್ತು ಎಂದರೆ ಸರಿ. ದಾವಾ ಆಸ್ತಿಯನ್ನು ದಿನಾಂಕ ಃ10.10.1945 ರಲ್ಲಿ ರಾಮಕ್ಕ ನವರು ನಮ್ಮ ತಾತ ಕೆಂಪಯ್ಯ ನವರಿಗೆ ಮಾರಾಟ ಮಾಡಿರುತ್ತಾರೆ ಎಂದರ ಸಾಕ್ಷಿ ಅವರು ರಂಗಯ್ಯ ನ ಮಗ ಕೆಂಪಯ್ಯ ನವರಿಗೆ ಮಾರಾಟ ಮಾಡಿರುತ್ತಾರೆ. ನನ್ನ ತಾತನಿಗೆ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮೊದಲಿಗೆ ಒಟ್ಟು 13 ಎಕರೆ 33 ಗುಂಟೆ ಜಮೀನಿತ್ತು ಎಂದರೆ ಸರಿ. ರಾಮಕ್ಕ ನವರು ಕೆಂಪಯ್ಯ ನವರಿಗೆ 6 ಎಕರೆ 36 ಗುಂಟೆ ಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಸರಿ , ಸದರಿ 6 ಎಕರೆ 36 ಗುಂಟೆಯೊಂದಿಗೆ ಅವರು 2 ಎಕರೆ ಖರಾಬ್ ನ್ನು ಕೂಡ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 'ಆ' ಖರಾಬ್ ಮತ್ತು 'ಬ' ಖರಾಬ್ ನ್ನು ಮಾರಾಟ ಮಾಡಲು ಆಗುವುದಿಲ್ಲ ಎಂದರೆ ಸಾಕ್ಷಿ ಸದರಿ ಜಮೀನು " ಆ " ಖರಾಬ್ ಆಗಿದ್ದು , ಅದನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಹಾಜರು ಮಾಡಿರುವ ನಿ ಡಿ 55 ರಲ್ಲಿ ಸದರಿ ಜಮೀನಿನಲ್ಲಿ " B" ಖರಾಬು ಇರುತ್ತದೆ ಎಂದು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿ ಸದರಿ ನಿಡಿ 55 ರಲ್ಲಿ ಇರುವ ಪಹಣಿ ಸ.ನಂ. 47 ಕ್ಕೆ ಸಂಬಂದಪಟ್ಟ ಪಹಣಿಯಾಗಿರುತ್ತದೆ, ನಾನು ಸ.ನಂ. 46 ರ ಬಗ್ಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಸ.ನಂ. 46 ರಲ್ಲಿ ಇರುವ ಉಳಿಕೆ 6 ಎಕರೆ 36 ಗುಂಟೆ ಜಮೀನನ್ನು ರೇವಣ್ಣ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಮಾರಾಟ ಮಾಡಿರಬಹುದು.

ನನ್ನ ತಾತ ಕೆಂಪಯ್ಯ ನವರಿಗೆ 3 ಜನ ಮಕ್ಕಳೆಂದರೆ ಸರಿ. ಅವರ ಹೆಸರು ದೊಡ್ಡಹೊನ್ನಯ್ಯ, ಮೂಗಪ್ಪ ಮತ್ತು ಚಿಕ್ಕ ಹೊನ್ನಯ್ಯ ಆಗಿರುತ್ತದೆ ಎಂದರೆ ಸರಿ. ನಮ್ಮ ತಾತ ಕೆಂಪಯ್ಯ ನವರು ತೀರಿಕೊಂಡ ನಂತರ ನಮ್ಮ ತಾತ ಲಕ್ಷ್ಮಮ್ಮ ಮತ್ತು ದೊಡ್ಡ ಹೊನ್ನಯ್ಯ ರವರ ಮಗ ಮರಿ ಹೊನ್ನಯ್ಯ ನವರು ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ತೀರಿಕೊಂಡ ನಂತರ ಸದರಿ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪೌತಿ

ಆಧಾರದ ಮೇಲೆ ನಿ ಪಿ 18 ರಂತೆ ಮ್ಯುಟೇಷನ್ ಆಗಿರುತ್ತದೆ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ಪೌತಿ ಖಾತೆ ಆದ ನಂತರ ನನ್ನ ದೊಡ್ಡಪ್ಪನ ಮಗ 3 ಎಕರೆ 20 ಗುಂಟೆ ಜಮೀನನ್ನು 9ನೆ ಪ್ರತಿವಾದಿಯ ಯಜಮನಾರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಸದರಿ ಮಾರಾಟ ನಕಲಿ ಖಾತೆಯ ಆಧಾರದ ಮೇಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿ ಡಿ 2 ಸದರಿ ಮಾರಾಟ ಮಾಡಿದ ಕ್ರಯಪತ್ರವಾಗಿರುತ್ತದೆ ಎಂದರೆ ಸಾಕ್ಷಿ ಸದರಿ ಕ್ರಯಪತ್ರವು ಸೃಷ್ಟಿತ ದಾಖಲಾತಿ ಆಗಿರುತ್ತದೆ ಎಂದು ನುಡಿಯುತ್ತಾರೆ . 3 ಎಕರೆ 16 ವರೆ ಗುಂಟೆ ಯಲ್ಲಿ ಮಾತ್ರ ದಾವಾ ಸ್ವತ್ತಿನಲ್ಲಿ ನನಗೆ ಅಧಿಕಾರ ಇರುತ್ತದೆ ಎಂದರೆ ಸರಿಯಲ್ಲ, ನಮ್ಮ ತಂದೆಯ ಹೆಸರಿನಲ್ಲಿ ಸ.ನಂ. 46/2 ರಲ್ಲಿ 6 ಎಕರೆ 36 ವರೆ ಗುಂಟೆ ಕ್ರಯದ ಪತ್ರ ನಮ್ಮ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದಲ್ಲಿ ಯಾವುದೇಖಾತೆ ಬದಲಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿಯ ಯಾವುದೇ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ನಮ್ಮ ಖಾತೆಯನ್ನು ನಮ್ಮ ತಂದೆಯಿಂದ ನಮ್ಮ ತಾಯಿ ಹೆಸರಿಗೆ ಪೌತಿ ಆಧಾರದ ಮೇಲೆ ಮಾಡಿಸಿಕೊಂಡಿರುತ್ತೇವೆ .

**ಮರುವಿಚಾರಣೆ ಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**